**ಸಿ.ಸಿ. ನಂ. 612/2018** **PW – 1**

<u>ದಿನಾಂಕಃ **18.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ನೇ ಆರೋಪಿ ಪರ ಶ್ರೀಮತಿ ಸಿ ಬಿ ಎ ವಕೀಲರಿಂದಃ</u>

ಸ್ಥಳಕ್ಕೆ ಹೋಗುವ ಮುನ್ನ FIR ದಾಖಲಾಗಿರಲಿಲ್ಲ ಎಂದರೆ ಸರಿ. 1 ನೇ ಆರೋಪಿ ಸಿಕ್ಕಿರುತ್ತಾನೆ ಆದ್ದರಿಂದ ಅವರನ್ನು ಗುರುತಿಸಿರುತ್ತೇನೆ. 1 ನೇ ಆರೋಪಿ 2 ಮತ್ತು 3 ನೇ ಆರೋಪಿಯ ವಿವರಗಳನ್ನು ಕೊಟ್ಟಿರುತ್ತಾನೆ. ಆರೋಪಿಗಳು ಕಡಿದ ಮರದ ತುಂಡುಗಳನ್ನು ಮಾಡುತ್ತಿದ್ದರು. ಕತ್ತಲಾದ ಕಾರಣ 4 – 5 ಜನ ಸ್ಥಳದಲ್ಲಿದ್ದು ಸರಿಯಾಗಿ ಯಾರು ಈ ಕೃತ್ಯ ಮಾಡುತ್ತಿದ್ದರು ಎಂದು ಹೇಳಲಾಗುವುದಿಲ್ಲ. ಸ್ಥಳದಲ್ಲಿ ಮರದ ಪುಡಿ ಕುಯ್ದಿದ್ದಕ್ಕೆ ಬಿದ್ದಿತ್ತು ಎಂದರೆ ಸರಿ. ಮರದ ಪುಡಿ ವಶಪಡಿಸಿಕೊಳ್ಳಲಿಲ್ಲ, ತುಂಡುಗಳನ್ನು ವಶಪಡಿಸಿಕೊಂಡಿರುತ್ತೇವೆ. ಇದರ ಜೊತೆಗೆ ಕತ್ತಿ ಮತ್ತು ಗರಗಸವನ್ನು ಅಮಾನತುಪಡಿಸಿಕೊಂಡಿರುತ್ತೇವೆ. 2 ಕುತ್ತಿಗಳಿದ್ದು 5 ಮೀ ಅಂತರದಲ್ಲಿತ್ತು. 2 ಕುತ್ತಿಗಳ ಅಂತರ ಮಹಜರ್ ನಲ್ಲಿ ಬರೆದಿಲ್ಲ, ಆದರೆ ಇವುಗಳ ಸುತ್ತಳತೆ ಬರೆದಿರುತ್ತೇವೆ. ಕುತ್ತಿಗಳ ಸಂಖ್ಯೆ ನೀಡಿದ್ದು ಮಹಜರ್ ನಲ್ಲಿ ಬರೆದಿದ್ದೇನೆ. 2 ಮರಗಳ ಒಟ್ಟು 6 ತುಂಡುಗಳಿದ್ದು ಈ ತುಂಡುಗಳಿಗೆ 1 ರಿಂದ 6 ಸಂಖ್ಯೆ ನೀಡಲಾಗಿದೆ. ಮಹಜರ್ ವೇಳೆ ಫೋಟೋ ತೆಗೆದಿಲ್ಲ. ಕೊಡಲಿಗಳಿಗೆ 7 ಸಂಖ್ಯೆ ಮತ್ತು ಗರಗಸಕ್ಕೆ ಸಂಖ್ಯೆ 8 ಎಂದುನೀಡಲಾಗಿದೆ. ಅಮಾನತುಪಡಿಸಿಕೊಂಡ ದಿನ ತುಂಡುಗಳನ್ನು 1 ನೇ ಆರೋಪಿಯ ಜೊತೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುವುದಿಲ್ಲ.

ಸ್ಥಳದಿಂದ ಹಾಡಿ ಹತ್ತಿರದಲ್ಲಿಲ್ಲ ತುಂಬಾ ದೂರದಲ್ಲಿದೆ. 1 ನೇ ಆರೋಪಿಯ ಮನೆ ಅಲ್ಲೇ ಹಾಡಿಯಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ಕಾಡು ವ್ಯಾಪ್ತಿ ಪ್ರದೇಶಕ್ಕೆ ಟ್ರಂಚ್ ಮಾಡಲಾಗಿದೆ ಎಂದರೆ ಸರಿ ಮತ್ತು ಆ ಕಾಲಕ್ಕೆ Solar fencing ಇರಲಿಲ್ಲ. ಸ್ಥಳದಲ್ಲಿ ಕಡಿದ ಮರದ ರೆಂಬೆಗಳು ಕಡಿದಿದ್ದು ಕಂಡು ಬಂತು. ಇವುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಿ. ಪಿ. 5 ಫೋಟೋದಲ್ಲಿ ಗುರುತಿಸಿದ ಸಂಖ್ಯೆಗಳು ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಈ

ಫೋಟೋ ನಮ್ಮ ಕಚೇರಿಯ ನಾಟಾಲಯದಲ್ಲಿ ತೆಗೆದ ಫೋಟೋ ಎಂದರೆ ಸರಿ. ಮು. ಮಾ 1 ಮತ್ತು 2 ರಮೇಲೆ ಪಂಚರ ಸಹಿ ಉಳ್ಳ ಚೀಟಿ ಇಲ್ಲ ಎಂದರೆ ಸರಿ. ಸ್ಥಳದಲ್ಲಿ ಮು. ಮಾ 1 ಮತ್ತು 2 ಅನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿ ಮಹಜರ್ ಅನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕಾಡಿನ ಹಾಡಿಯಲ್ಲಿರುವ ಜನಗಳನ್ನು ಕಾಡಿನಿಂದ ಆಚೆ ಹಾಕಲು ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಘಟನಾ ಸ್ಥಳದಲ್ಲಿ ಹಿಡಿದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಕಾಡಿನೊಳಗೆ ಅಕ್ರಮ ಪ್ರವೇಶ ಮಾಡಿಲ್ಲ ಮತ್ತು ಕಾಡಿನ ಪ್ರಾಣಿಗಳ ಆವಾಸ ಸ್ಥಾನಗಳಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮು. ಮಾ 1 ಮತ್ತು 2 ವಸ್ತುಗಳಿಂದ ತೇಗ ಮತ್ತು ಬೀಟೆ ಮರದ ವಸ್ತುಗಳನ್ನು ಕಡಿಯಲಾಗುವುದಿಲ್ಲ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ಮುಂದೆ ಇರುವ ಮು. ಮಾ 1 ಮತ್ತು 2 ರ ಮೇಲೆ ಕೊಟ್ಟಿರುವ ಕ್ರಮ ಸಂಖ್ಯೆ ಕಾಣುತ್ತಿಲ್ಲ ಎಂದರೆ ಸರಿ. ಮು. ಮಾ 1 ಮತ್ತು 2 ರ ಮೇಲೆ paint ನಲ್ಲಿ ಸಂಖ್ಯೆ ಬರೆಯಲಾಗಿತ್ತು, ತುಕ್ಕು ಹಿಡಿದುಹೋಗಿರುತ್ತದೆ.

2 ಮತ್ತು 3 ನೇ ಆರೋಪಿ ಪರ ವಕೀಲರು ಪಾಟೀ ಸವಾಲನ್ನು ಅನುಮೋದಿಸಲು ಕೋರಿ ಒಪ್ಪಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ